ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/44/ಸಿಸಿಟೆಕ್/2018-19/2968

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:07-02-2019

**-:ಸುತ್ತೋಲೆ:-**

ವಿಷಯ: ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು ಇಲ್ಲಿ "Research Methodology and Thesis Writing" ಎಂಬ ವಿಷಯದ ಅಲ್ಪಾವಧಿ ತರಬೇತಿಗೆ ಭಾಗವಹಿಸಲು ನೊಂದಾಯಿಸಿಕೊಂಡಿರುವ ಉಪನ್ಯಾಸಕರ ಪಟ್ಟಿಗೆ ಅನುಮೋದನೆ ಹಾಗೂ ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ: ಡಿಟಿಇ/44/ಸಿಸಿಟೆಕ್/2018-19 ದಿನಾಂಕ: 06-02-2019.
2. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು ಇವರ ಪತ್ರ ಸಂಖ್ಯೆ: GPTH182/CCTEK/2018-19/1650, ದಿ:07-02-2019.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅನ್ವಯ ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು ಇಲ್ಲಿ ಸಿಸಿಟೆಕ್ ಉಪಘಟಕದ ವತಿಯಿಂದ ವಿವಿಧ ಪಾಲಿಟೆಕ್ನಿಕ್ ಕಾಲೇಜುಗಳ ಎಲ್ಲಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ದಿನಾಂಕ:11-02-2019 ರಿಂದ ದಿ:23-02-2019 ರವರೆಗೆ (3.00 PM ರಿಂದ 7.30 PM ರವರೆಗೆ) "Research Methodology and Thesis Writing" ಎಂಬ ವಿಷಯದ ಬಗ್ಗೆ ಎರಡು ವಾರಗಳ ಅಲ್ಪಾವಧಿ ತರಬೇತಿಯನ್ನು ಆಯೋಜಿಸಲಾಗಿದ್ದು, ತತ್ಸಂಬಂಧ ಉಲ್ಲೇಖ(2)ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ತರಬೇತಿಯಲ್ಲಿ ಭಾಗವಹಿಸಲು ನೊಂದಾಯಿಸಿಕೊಂಡಿರುವ ಉಪನ್ಯಾಸಕರ ಪಟ್ಟಿಗೆ ಅನುಮೋದನೆ ಹಾಗೂ ಹಾಜರಾಗಲು ಅನುಮತಿ ನೀಡಲಾಗಿದೆ. ಸದರಿ ತರಬೇತಿಯಲ್ಲಿ ಭಾಗವಹಿಸಿರುವ ಅಭ್ಯರ್ಥಿಗಳಿಗೆ ನೀಡಲಾಗುವ Course/Study Material (1Set) ಅನ್ನು ಜಂಟಿ ನಿರ್ದೇಶಕರು (ಸಿಡಿಸಿ) ವಿಭಾಗಕ್ಕೆ **ಕಳುಹಿಸಲು ಸೂಚಿಸಿದೆ. (ಅಭ್ಯರ್ಥಿಗಳ ಪಟ್ಟಿ ಲಗತ್ತಿಸಿದೆ)**

**ಸದರಿ ಅಲ್ಪಾವಧಿ ತರಬೇತಿಯಲ್ಲಿ ಭಾಗವಹಿಸಲು,** ನೊಂದಾಯಿಸಿಕೊಂಡು ಆಯ್ಕೆಯಾಗಿರುವ ಉಪನ್ಯಾಸಕರುಗಳು ಕಡ್ಡಾಯವಾಗಿ ಪೂರ್ವಾಹ್ನ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿ, ಪ್ರಾಚಾರ್ಯರ ಅನುಮತಿಯನ್ನು ಪಡೆದು ನಿಗದಿತ ಸಮಯದಲ್ಲಿ ತರಬೇತಿಗೆ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ. ಸದರಿಯವರ ತರಬೇತಿಯ ಅವಧಿಯಲ್ಲಿ ಸಂಸ್ಥೆಯ ಹಾಗೂ ವಿಭಾಗಗಳ ದೈನಂದಿನ ಮತ್ತು ಶೈಕ್ಷಣಿಕ ಕೆಲಸ ಕಾರ್ಯಗಳಿಗೆ/ಪಾಠ ಪ್ರವಚನಗಳಿಗೆ ಯಾವುದೇ ತೊಂದರೆಯಾಗದಂತೆ ಪ್ರಾಚಾರ್ಯರು ಕ್ರಮವಹಿಸಲು ಸೂಚಿಸಲಾಗಿದೆ. ಈ ಸಂಬಂಧವಾಗಿ ಇಲಾಖೆಯಿಂದ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ನೀಡಲಾಗುವುದಿಲ್ಲ.

ತರಬೇತಿ ನಡೆಯುವ ಸಮಯದಲ್ಲಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿದಾಗ ನಡೆಸುತ್ತಿರುವ/ನಡೆಸಿರುವ ತರಬೇತಿಗಳಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗಳ ಹಾಜರಾತಿ ಹಾಗೂ ಪೂರ್ಣ ಪ್ರಮಾಣದ ವಿವರಗಳ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪ್ರಾಂಶುಪಾಲರು ಯಾವುದೇ ತಾಂತ್ರಿಕ ಸಮಸ್ಯೆಗಳು ಉಂಟಾಗದಂತೆ ಎಚ್ಚರಿಕೆ ವಹಿಸಿ ತರಬೇತಿಗಳನ್ನು ನಡೆಸಬೇಕೆಂದು ಹಾಗೂ ತರಬೇತಿಯ ಸಾಧಕ ಬಾಧಕಗಳಿಗೆ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ಸೂಚಿಸಲಾಗಿದೆ.

ಸದರಿ ಅಲ್ಪಾವಧಿ ತರಬೇತಿಯಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೀಡುವ ತರಬೇತಿ ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯ ಜೊತೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ನಮೂದಿಸಿ ನೀಡುವಂತೆ ಕ್ರಮ ವಹಿಸುವುದು ಹಾಗೂ ತರಬೇತಿ ಅಂತ್ಯದಲ್ಲಿ ತರಬೇತಿಯಲ್ಲಿ ಭಾಗವಹಿಸಿರುವ ಅಭ್ಯರ್ಥಿಗಳಿಗೆ ನೀಡುವ ತರಬೇತಿಯ ಮಾದರಿ ಪ್ರಮಾಣ ಪತ್ರಕ್ಕೆ ಇಲಾಖೆಯಿಂದ ಕಡ್ಡಾಯವಾಗಿ ಅನುಮೋದನೆ ಪಡೆದು ನಂತರ ಅಭ್ಯರ್ಥಿಗಳಿಗೆ ನೀಡಲು ಸಹ ಸೂಚಿಸಲಾಗಿದೆ.

--2

ಸದರಿ ತರಬೇತಿ ಕಾರ್ಯಕ್ರಮ ನಡೆಸಲಾದ ಒಂದು ತಿಂಗಳೊಳಗಾಗಿ ತರಬೇತಿಯ ಸಲುವಾಗಿ ಪಡೆದ ಶುಲ್ಕ, ಖರ್ಚು-ವೆಚ್ಚಗಳ ಪಟ್ಟಿ, ಭಾಗವಹಿಸಿದ ಅಭ್ಯರ್ಥಿಗಳ ಹಾಜರಾತಿ ಪಟ್ಟಿಯೊಂದಿಗೆ ಸಮಗ್ರ ವರದಿಯನ್ನು ಹಾಗೂ ಲಾಭಾಂಶದ ಶೇ.25ರ ಮೊತ್ತವನ್ನು ಡಿ.ಡಿ. ಮೂಲಕ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ/ಕಾರ್ಯದರ್ಶಿಗಳು, ನಿರಂತರ ತಾಂತ್ರಿಕ ಶಿಕ್ಷಣ ಕೇಂದ್ರ, ಬೆಂಗಳೂರು ಇವರ ಹೆಸರಿಗೆ ಸಂದಾಯವಾಗುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಮುಂದುವರೆದು, ಇಲಾಖೆಯೊಂದಿಗೆ ಯಾವುದೇ ರೀತಿಯ ಪತ್ರವ್ಯವಹಾರ ನಡೆಸುವಾಗ ಆಂಗ್ಲ ಭಾಷೆಯಲ್ಲಿ ವ್ಯವಹರಿಸದೆ, ಕಡ್ಡಾಯವಾಗಿ ಕನ್ನಡದಲ್ಲೇ ವ್ಯವಹರಿಸುವಂತೆ ಹಾಗೂ ಪ್ರಸ್ತಾವನೆ ಜೊತೆ ಲಗತ್ತಿಸುವ ಅನುಬಂಧಗಳನ್ನು ಸಹ ಕನ್ನಡದಲ್ಲೇ ನೀಡುವಂತೆ ಕ್ರಮ ವಹಿಸಲು ಪ್ರಾಚಾರ್ಯರಿಗೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:- ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು ಇವರ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಸಹಾಯಕ ನಿರ್ದೇಶಕರು/ಅಭಿವೃದ್ಧಿ ಅಧಿಕಾರಿಗಳು (ಸಿಸಿಟೆಕ್), ತಾಂ.ಶಿ. ನಿರ್ದೇಶನಾಲಯ, ಬೆಂಗಳೂರು ಇವರು ಸದರಿ ತರಬೇತಿ ನಡೆಯುವ ಸಮಯದಲ್ಲಿ ಒಂದು ಅಥವಾ ಎರಡು ಭಾರಿ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.
2. ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿ.ಟಿ.ಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

CCTEK SUB-CENTRE

GOVT POLYTECHNIC, HIRIYUR

TWO WEEKS STTP ON "RESEARCH METHODOLOGY AND THESIS WRITING"

Date: 11-02-2019 to 23-02-2019 Time: 3.00 PM to 7.30PM

APPROVED LIST OF PARTICIPANTS

| SL NO | NAME OF THE STAFF | PROGRAMME | NAME OF THE INSTITUTE |
|---|---|---|---|
| 1 | SHIVARAJAN N | LECTURER IN CE | GOVT POLYTECHNIC, HIRIYUR |
| 2 | BADARINARAYAN V S | LECTURER IN CS | GOVT POLYTECHNIC, HIRIYUR |
| 3 | RAKESH S | LECTURER IN EC | GOVT POLYTECHNIC, HIRIYUR |
| 4 | SHASHIDHARA K N | LECTURER IN ME | GOVT POLYTECHNIC, HIRIYUR |
| 5 | SAMPATHKUMAR R | LECTURER IN EC | GOVT POLYTECHNIC, CHITRADURGA |
| 6 | PURUSHOTHAMA S | LECTURER IN EC | GOVT POLYTECHNIC, CHITRADURGA |
| 7 | GIRISHA N | LECTURER IN ME | GOVT POLYTECHNIC, CHITRADURGA |
| 8 | PAVITHRA B B | LECTURER IN EC | GOVT POLYTECHNIC, HOSADURGA |
| 9 | MANJUNATHA R | LECTURER IN ME | GOVT POLYTECHNIC, HOSADURGA |
| 10 | SHIVAYOGI E BISANALLI | LECTURER IN CE | GOVT POLYTECHNIC, HIRIYUR |
| 11 | PAVANKUMAR H | LECTURER IN CS | GOVT POLYTECHNIC, HIRIYUR |
| 12 | PRASADKUMAR C M | LECTURER IN ME | GOVT POLYTECHNIC, HIRIYUR |
| 13 | MARY SWETHA G | LECTURER IN CE | GOVT POLYTECHNIC, HIRIYUR |
| 14 | SUSHMA C M | LECTURER IN CE | GOVT POLYTECHNIC, HIRIYUR |
| 15 | SWETHA M S | LECTURER IN CS | GOVT POLYTECHNIC, HIRIYUR |
| 16 | MANJUNATHA | LECTURER IN ME | GOVT POLYTECHNIC, HIRIYUR |
| 17 | NAVEENKUMAR H S | LECTURER IN ME | GOVT POLYTECHNIC, HIRIYUR |
| 18 | THARA B S | LECTURER IN CS | GOVT POLYTECHNIC, TUMKURU |
| 19 | KAVITHA | LECTURER IN CS | GOVT POLYTECHNIC, TUMKURU |

8.2.19

JOINT DIRECTOR (CDC)

DEPARTMENT OF TECHNICAL EDUCATION

BANGALORE-560 001